

# ಮಾಯಾವಿ ಮುಖವಾಡ

ಜಗವೊಂದು ಮಾಯಾ ಲೋಕ
ಚಿತ್ತ ಚಂಚಲಗೊಳಿಸಿ
ಬಯಕೆಗಳ ಅಮಲುಣಿಸಿ
ತೇಲಿಸಿ ಮುಳುಗಿಸುತ ಬೇಟೆಯಾಡುವ
ಮಾಯಾಮೃಗಗಳ ನರಕ...

ಕನಸುಗಳ ಚಿವುಟುವ
ಮನಸುಗಳ ಗೀರುವ
ಕರಾಳ ಬಾಹುಗಳ ಕ್ರೌರ್ಯ ಸಂಕೋಲೆ
ಅಡಿಗಡಿಗೂ ಇರಿದಿರಿದು
ನುಡಿಯ ಮೊನೆಯಲಿ ಕೊಲ್ಲುವ
ದುಷ್ಟ ಕೂಟಗಳ ಕರಾಳ ಲೀಲೆ...

ಈ ಮಾಯಾವಿ ಮುಖವಾಡಗಳ
ಕಳಚಿ ಹರಿದೊಗೆವ
ನಿರ್ಬಂಧದ ಸಂಕೋಲೆಗಳ
ಬುಡವ ಕಡಿದೊಗೆವ
ಮಾಯಾಮೃಗಗಳ ಸಂತತಿಯ
ಬೆನ್ನತ್ತಿ ಬೇಟೆಯಾಡುವ
ಗಟ್ಟಿತನ ಮೊಳಕೆಯೊಡೆಯಲಿ
ಮುಖವಾಡಗಳ ಒಳಗೆ!
ನೈಜತೆಯು ಮೇಳೈಸಲಿ
ಮುಖವಾಡಗಳ ಹೊರಗೆ!!

ಕಂಪಿಸಲಿ ಆಕ್ರಮಿಸುವ ಕರಗಳು...
ಝೇಂಕರಿಸಲಿ ಭರವಸೆಯ ಬಾಹುಗಳು...

● ಬಾಲಕೃಷ್ಣ ದೇವನಮನೆ

# ಅಭಿವ್ಯಕ್ತಿ

ತಡೆ ಹಿಡಿಯಲು ಪಡಿಮೂಡಿವೆ
ಒಡಲಾಳದ ಕೈಗಳು
ಬಲೆ ಬಿಡಿಸಲು ಪರದಾಡಿವೆ
ಬಂಡೇಳದ ಕಂಗಳು

ನಾಚಿ ಮುಖವ ಮುಚ್ಚಿ
ಮುಸಿ ಮುಸಿ ನಗುವಾಗ
ಬಾಚಿ ತಬ್ಬಿದ
ಆ ಕೈ ಯಾರದೋ!

ಯಾರೋ ಬೀಸಿದ ಭರಕೆ
ಕಣ್ಣೀರು ಕೆಳಜಾರಿ
ಕೆನ್ನೆ ಸೇರುವ ಮೊದಲು
ಒರೆಸಲು ಯಾವ
ಬೆರಳುಗಳೂ ಬಾರವೆ?
ಮನದ ತುಂಬೆಲ್ಲಾ
ಸುಖ ದುಃಖ ಸುಮ್ಮಾನ
ಮೌನ ಮಾತಾಗಿಸಲು ಕೂಡ
ಕೈಗಳ ಕಡಿವಾಣ

ಮೈಯ ತುಂಬ ಕೈಗಳು
ಮುಚ್ಚಿ ಅಳುವ ಕಂಗಳು

● ಎಚ್.ವಿ. ಶ್ರೀನಿಧಿ